ಇ) "ಅ" ನಲ್ಲಿ ಉತ್ತರಿಸಿರುವುದರಿಂದ ಉದ್ಭವಿಸಂವುದಿಲ್ಲ.

ಈ) ಇಲ್ಲ

ಕ್ರೀಡಾಂಗಣಗಳು

೧೮೫. ಶ್ರೀ ವೇದಾಂತ ಹೆವಿಮ್ಮಿಗೆ (ಕೃಷ್ಣ ರಾಜ).—ಮಾನ್ಯ ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಂವರೇ ?

ಅ) ರಾಜ್ಯದಲ್ಲಿ ಯಾವ ಯಾವ ಪಟ್ಟಣಗಳಲ್ಲಿ ಕ್ರೀಡಾಂಗಣವನ್ನು ಕಟ್ಟಲಾಗಿದೆ.

ಆ) ಕ್ರೀಡಾಂಗಣಗಳನ್ನು ಕಟ್ಟಲು ಸರ್ಕಾರವು ವೆಚ್ಚ ಮಾಡಿರುವ ಹಣವೆಷ್ಟು ?

ಇ) ಇತರೆ ಯಾವ ಪಟ್ಟಣಗಳಲ್ಲಿ ಕ್ರೀಡಾಂಗಣಗಳನ್ನು ಕಟ್ಟಲು ಸರ್ಕಾರ ಉದ್ದೇಶಿಸಿದೆ.

ಶ್ರೀ ಬಿ. ಎಲ್. ಶಂಕರ್ (ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಮಂತ್ರಿಗಳು).—

ಅ) ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಕ್ರೀಡಾಂಗಣಗಳನ್ನು ಕಟ್ಟಲಾಗುತ್ತಿದೆ.

ಆ) ಇದುವರೆವಿಗೂ ರಾಜ್ಯ ಸರ್ಕಾರದಿಂದ ರೂ. ೧,೭೧,೫೮, ೨೦೦-೦೦ ಗಳನ್ನು ಕೇಂದ್ರ ಸರ್ಕಾರದಿಂದ ರೂ. ೨೮,೭೪.೦೦೦ ರೂ ಗಳನ್ನು ಹಾಗೂ ಸಾರ್ವಜನಿಕರಿಂದ ರೂ. ೧,೭೦,೪೦,೭೭೭ –೪೪ ಗಳನ್ನು ಒಟ್ಟು ರೂ. ೩,೭೦,೭೨೯೯೭–೪೪ ಗಳು ವೆಚ್ಚವಾಗಿದೆ.

ಇ) ಜಿಲ್ಲಾ ಮಟ್ಟದ ಕ್ರೀಡಾಂಗಣದ ನಿರ್ಮಾಣ ಪೂರ್ಣಗೊಂಡ ನಂತರ ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ಮಾಣದ ಕಾರ್ಯವನ್ನು ತೆಗೆದುಕೊಳ್ಳುವ ಉದ್ದೇಶ ಇದೆ. ಸದ್ಯದಲ್ಲಿ ತಾಲ್ಲೂಕು ಮಟ್ಟದಲ್ಲಿ ದಾವಣಗೆರೆ. ಚಿಕ್ಕ ಬಳ್ಳಾಪುರ, ಹೊಳೇನರಸೀಪುರ ಸಾಗರ, ಬೆಳ್ಳೂರು (ಆದಿಚುಂಚನಗಿರಿ ಗದಗ (ಧಾರವಾಡ ಜಿಲ್ಲೆ) ಕೊಪ್ಪಳ (ರಾಯಚೂರು ಜಿಲ್ಲೆ) ಬಾಗಲಕೋಟೆ (ಬಿಜಾಪುರ ಜಿಲ್ಲೆ) ಪ್ರಸ್ತಾವನೆಯ ಪರಿಶೀಲನೆಯಲ್ಲಿದೆ.

ಸಿಂಗ್ ಸಮಿತಿಯ ವರದಿ ಕುರಿತು

೪೨೩. ಶ್ರೀ ಬಾಬುರೆಡ್ಡಿ ತುಂಗಳ (ಬೀಳಗಿ).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಣ ಪತ್ರಿಕೆಗಳ ಅಭ್ಯುದಯಕ್ಕಾಗಿ ಸರ್ಕಾರವು ನಿಯಮಿಸಿದ ಸಿಂಗ್ ಸಮಿತಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ಸದರಿ ವರದಿಯನ್ನು ಸರ್ಕಾರದವರು ಅಮೂಲಾಗ್ರವಾಗಿ ಒಪ್ಪಿಕೊಂಡಿದ್ದಾರೆಯೇ ?

ಇ) ಹಾಗಿದ್ದಲ್ಲಿ, ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಚಿಕ್ಕ ಮಧ್ಯಮ ಪತ್ರಿಕೆಗಳ ಅಭ್ಯುದಯಕ್ಕಾಗಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ಹೌದು

ಆ) ವರದಿಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಇ) ಎಂ. ಬಿ. ಸಿಂಗ್, ಸಮಿತಿಯ ವರದಿಯ ಶಿಫಾರಸ್ಸಿನಂತೆ ಸಣ್ಣ ಪತ್ರಿಕೆಗಳ ಜಾಹೀರಾತು ದರಗಳನ್ನು ಪುನರ್ ವಿಮರ್ಶಿಸಿ, ಆದೇಶ ಹೊರಡಿಸಲಾಗಿದೆ. ಈ ಪ್ರಕಾರ ಸಣ್ಣ ಪತ್ರಿಕೆಗಳ ಕನಿಷ್ಟ ಜಾಹೀರಾತು ದರವನ್ನು ಪ್ರತಿ ಕಾಲಂ ಸೆಂ. ಮೀ. ಗೆ ೫.೦೦ ರೂ. ನಂತೆ ನಿಗದಿ ಮಾಡಲಾಗಿದೆ. ಸಮಿತಿಯ ಉಳಿದ ಶಿಫಾರಸ್ಸುಗಳು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.